# ಅಂಗಳದಲ್ಲಿ ಕಾಣದು ಸೆರೆನಾ ಮಿಂಚು



■ ಪ್ರವೀಣ ಕುಲಕರ್ಣಿ

ಆಗಸ್ಟ್ ಅಂತ್ಯದಿಂದ ಆರಂಭವಾಗಲಿರುವ ಯುಎಸ್ ಓಪನ್ ಗ್ರ್ಯಾನ್ ಸ್ಲಾಮ್ ಟೆನಿಸ್ ಚಾಂಪಿಯನ್‌ಷಿಪ್‌ನ ಟಿಕೆಟ್‌ಗಳೀಗ ನಮ್ಮಲ್ಲಿನ ಬೆಣ್ಣೆ ದೋಸೆಗಳಂತೆ ಖರ್ಚಾಗುತ್ತಿವೆ. ಬೇರೆ ವರ್ಷಗಳಿಗೆ ಹೋಲಿಸಿದರೆ ಟಿಕೆಟ್‌ಗೆ ಎಂಟು ಪಟ್ಟು ಹೆಚ್ಚು ಬೇಡಿಕೆ ಇದೆಯೆಂದು ಸಂಘಟಕರು ಹೇಳುತ್ತಾರೆ. ಏಕೆ ಇಷ್ಟೊಂದು ಬೇಡಿಕೆ ಗೊತ್ತೆ? ಜಗತ್ತಿನ ಕ್ರೀಡಾರಂಗದ ಸಾರ್ವಕಾಲಿಕ ಶ್ರೇಷ್ಠ ತಾರೆಗಳಲ್ಲಿ ಒಬ್ಬರೆನಿಸಿದ ಸೆರೆನಾ ವಿಲಿಯಮ್ಸ್ ಅವರ ವೃತ್ತಿ ಬದುಕಿನ ಕೊನೆಯ ಟೂರ್ನಿ ಅದು. ಹಾರ್ಡ್ ಕೋರ್ಟ್‌ನಲ್ಲಿ ಕೊನೆಯ ಬಾರಿಗೆ ಸೆರೆನಾ ಅವರ 'ಲೈವ್ ಆ್ಯಕ್ಷನ್' ಕಣ್ತುಂಬಿಕೊಳ್ಳುವ ತವಕ ಟೆನಿಸ್‌ಪ್ರಿಯರಿಗೆ. ಏಕೆಂದರೆ, ಆ ಟೂರ್ನಿ ಬಳಿಕ ಈ ಟೆನಿಸ್ ತಾರೆ ಕ್ರೀಡಾ ಬದುಕಿಗೆ ಗುಡ್‌ಬೈ ಹೇಳಲಿದ್ದಾರೆ. 23 ಗ್ರ್ಯಾನ್ ಸ್ಲಾಮ್‌ಗಳು ಅವರ ಮನೆಯ ಶೋಕೇಸ್‌ನಲ್ಲಿ ಫಳ ಫಳ ಹೊಳೆಯುತ್ತಿವೆ.

'ಟೆನಿಸ್‌ನಿಂದ ನಿವೃತ್ತಿಯಾಗುವೆ ಎಂದು ನಾನು ಹೇಳುವುದಿಲ್ಲ. ಈ ನಿವೃತ್ತಿ ಪದ ಎಂದರೆ ನನಗೆ ಅಲರ್ಜಿ. ಆದರೆ, ನನಗೂ ಈಗ 41 ವರ್ಷಗಳಾದವು. ಬದುಕಿನ ಬೇರೆ ಅಂಶಗಳ ಕಡೆಗೂ ನಾನು ಗಮನಹರಿಸಬೇಕಿದೆ. ಇನ್ನೊಂದು ಮಗುವಿನ ತಾಯಿ ಆಗಬೇಕಿದೆ. ನನ್ನ ಉದ್ಯಮವನ್ನು ಇನ್ನಷ್ಟು ಬೆಳೆಸಬೇಕಿದೆ. ಜೀವನದಲ್ಲಿ ಮತ್ತೊಂದು ಎತ್ತರಕ್ಕೆ ಏರಬೇಕಿದೆ. ಹೀಗಾಗಿ ಯುಎಸ್ ಓಪನ್ ಗ್ರ್ಯಾನ್ ಸ್ಲಾಮ್ ನಂತರ ಮತ್ತೆ ಸ್ಪರ್ಧಾಕಣಕ್ಕೆ ಇಳಿಯುವುದಿಲ್ಲ' ಎಂದು ಸೆರೆನಾ ಹೇಳುತ್ತಾರೆ. 2017ರಲ್ಲಿ ಗರ್ಭಿಣಿಯಾಗಿದ್ದ ಆಕೆ, ಆಸ್ಟ್ರೇಲಿಯನ್ ಓಪನ್‌ನಲ್ಲಿ ಗೆಲುವಿನ ಮಂದಹಾಸ ಬೀರಿದ್ದರು. ಆ ಗೆಲುವಿನ ಕೆಲವರು ವಾರಗಳ ಬಳಿಕ ಹೆರಿಗೆಗೆ ತೆರಳಿದ್ದರು. ಸರಿಯಾಗಿ ಎರಡೂವರೆ ದಶಕಗಳ ಹಿಂದೆ ಟೆನಿಸ್ ಅಂಗಳಕ್ಕೆ ದಾಂಗುಡಿ ಇಟ್ಟ ಅಮೆರಿಕದ ಈ ಜೀವಂತ ದಂತಕಥೆ, ನಿರ್ಮಿಸಿದ ದಾಖಲೆಗಳಿಗೆ ಲೆಕ್ಕವಿಲ್ಲ. 2002ರ ಫ್ರೆಂಚ್ ಓಪನ್‌ನಿಂದ 2003ರ ಆಸ್ಟ್ರೇಲಿಯನ್ ಓಪನ್‌ವರೆಗೆ ಎಲ್ಲ ನಾಲ್ಕೂ ಗ್ರ್ಯಾನ್ ಸ್ಲಾಮ್‌ಗಳನ್ನು ಗೆದ್ದ ದಾಖಲೆ ಅವರದು. ನಾಲ್ಕೂ ಸಲ ಅಕ್ಕ ವೀನಸ್ ಅವರನ್ನು ಸೋಲಿಸಿ, ಅವರು ಪ್ರಶಸ್ತಿ ಗೆದ್ದ ರೀತಿಯನ್ನು ನೋಡಿ ಟೆನಿಸ್ ಜಗತ್ತು ಅವರ ಸಾಧನೆಯನ್ನು 'ಸೆರೆನಾ ಸ್ಲಾಮ್' ಎಂದೇ ಕರೆದಿತ್ತು.

ತಂದೆ ರಿಚರ್ಡ್ಸ್ ವಿಲಿಯಮ್ಸ್ ಮತ್ತು ತಾಯಿ ಒರಾಸಿನ್ ಪ್ರೈಸ್ ಇಬ್ಬರೂ ಟೆನಿಸ್ ಕೋಚ್‌ಗಳಾಗಿದ್ದವರು. ಸೆರೆನಾ, ನಾಲ್ಕು ವರ್ಷದ ಬಾಲಕಿಯಾಗಿದ್ದಾಗಲೇ ಕೈಯಲ್ಲಿ ರಾಕೆಟ್ ಹಿಡಿದು, ಅಂಕಣಕ್ಕೆ ಇಳಿದರು. ಅದಾಗಲೇ ಅಕ್ಕ ವೀನಸ್ ಕೂಡ ತರಬೇತಿ ಪಡೆಯುತ್ತಿದ್ದರು. ತಮ್ಮ ಪುತ್ರಿಯರನ್ನು ಶಾಲೆಗೆ ಕಳುಹಿಸದೆ ಮನೆಯಲ್ಲೇ ಪಾಠ ಮಾಡಿಸುತ್ತಿದ್ದ ರಿಚರ್ಡ್ಸ್, ಅವರು ಮೂರೂ ಹೊತ್ತು ಟೆನಿಸ್‌ನ ಜಪ ಮಾಡುವಂತೆ ನೋಡಿಕೊಂಡಿದ್ದರು. ವೃತ್ತಿಪರ ಆಟಕ್ಕೆ ಇಳಿದ ಮೇಲೆ ತಮ್ಮ ಸಾಧನೆಗಳ ಬಲದಿಂದ ವಿಲಿಯಮ್ಸ್ ಸಹೋದರಿಯರು ಜಗತ್ತಿನ ಗಮನವನ್ನೇ ತಮ್ಮತ್ತ ಸೆಳೆದರು. ಅದರಲ್ಲೂ ಸೆರೆನಾ ಅವರ ಸಾಧನೆ ಕಣ್ಣು ಕುಕ್ಕಿಸುವಂತಿತ್ತು.

ಆಕ್ರಮಣಕಾರಿ ಬೇಸ್‌ಲೈನ್ ಆಟಗಾರ್ತಿ ಎನಿಸಿರುವ ಸೆರೆನಾ, ಬಲಶಾಲಿಯಾದ ನೆಲಮಟ್ಟದ ಸ್ಟ್ರೋಕ್‌ಗಳಿಗೆ ಹೆಸರುವಾಸಿ. ಅವರ ಬತ್ತಳಿಕೆಯ ಪ್ರಧಾನ ಅಸ್ತ್ರವೆಂದರೆ ಅದು ಸರ್ವ್. ಮಿಂಚಿನ ವೇಗದ ಸರ್ವ್‌ಗಳು ಎದುರಾಳಿಯನ್ನು ಕಂಗೆಡಿಸಬಲ್ಲವಾಗಿದ್ದವು. ಅಕ್ಕ ವೀನಸ್ ಅವರಲ್ಲದೆ ಮಾರ್ಟಿನಾ ಹಿಂಗಿಸ್, ಜೆನ್ನಿಫರ್ ಕ್ಯಾಪ್ರಿಯಾಟಿ, ಜೆಸ್ಟಿನ್ ಹೆನಿನ್, ವಿಕ್ಟೋರಿಯಾ ಅಜರೆಂಕಾ ಮತ್ತು ಮರಿಯಾ ಶಾರ್ಪೊವಾ ಅವರಿಗೂ ಸೋಲಿನ ರುಚಿ ತೋರಿಸಿದ್ದರು.

ಮನಸ್ಸಿಗೆ ತೋಚಿದಂತೆ ನಡೆಯುವ ಬಿಡುಬೀಸಾದ ವ್ಯಕ್ತಿತ್ವ ಹೊಂದಿರುವ ಸೆರೆನಾ ಹಲವು ವಿವಾದಗಳನ್ನೂ ಮೈಮೇಲೆ ಎಳೆದುಕೊಂಡವರು. ವೀನಸ್ ಅವರೊಂದಿಗೆ ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡ ಆರೋಪವನ್ನು ಅವರು ಬಾರಿ ಬಾರಿ ಎದುರಿಸಿದ್ದಿದೆ. ರೆಫ್ರಿಯೊಬ್ಬರ ಮೇಲೆ ಜನಾಂಗೀಯ ನಿಂದನೆ ಮಾಡಿದ ಆರೋಪ ಹೊರಿಸಿದ್ದ ಅವರು, ಕ್ಷಮೆ ಕೇಳಲಿಲ್ಲ ಎಂದು ಬೇಸರಿಸಿಕೊಂಡು ಟೂರ್ನಿಯಿಂದಲೇ ಹಿಂದೆ ಸರಿದಿದ್ದರು. 2018ರ ಯುಎಸ್ ಓಪನ್ ಫೈನಲ್‌ನಲ್ಲಿ ನವೊಮಿ ಒಸಾಕಾ ವಿರುದ್ಧ ಸೆರೆನಾ ನಡೆದುಕೊಂಡ ರೀತಿಯೂ ವಿವಾದದ ಸುಂಟರಗಾಳಿಯನ್ನು ಎಬ್ಬಿಸಿತ್ತು.

ಟೆನಿಸ್ ಅಂಗಳದ ಆಚೆಗೂ ಸೆರೆನಾ ಸುದ್ದಿಯಲ್ಲಿದ್ದವರು. ಹಲವು ಬ್ರ್ಯಾಂಡ್‌ಗಳ ರೂಪದರ್ಶಿಯಾಗಿ ಕೆಲಸ ಮಾಡಿದವರು. ಫ್ಯಾಷನ್ ಷೋನಲ್ಲೂ ಮಿಂಚು ಹರಿಸಿದವರು. ಜನಾಂಗೀಯ ನಿಂದನೆ ವಿರುದ್ಧ, ಲಿಂಗ ತಾರತಮ್ಯದ ವಿರುದ್ಧ ದೊಡ್ಡದಾಗಿ ಧ್ವನಿ ಎತ್ತಿದವರು. ಸಾಗರೋಪಾದಿಯಾಗಿ ಹರಿದುಬಂದ ಹಣದಲ್ಲಿ ಸಾಮಾಜಿಕ ಕಾರ್ಯಗಳಿಗೆ ದೊಡ್ಡ ಪ್ರಮಾಣದಲ್ಲಿಯೇ ನಿಧಿ ಎತ್ತಿಕೊಟ್ಟವರು. ಪತಿ ಅಲೆಕ್ಸಿಸ್ ಒಹಾನಿಯನ್, ಮಗಳು ಅಲೆಕ್ಸಿಸ್ ಒಲಿಂಪಿಯಾ ಒಹಾನಿಯನ್ ಜ್ಯೂನಿಯರ್ ಸಂತೃಪ್ತ ಜೀವನವನ್ನು ನಡೆಸುತ್ತಿರುವವರು. ನಾಲ್ಕೂ ಗ್ರ್ಯಾನ್ ಸ್ಲಾಮ್‌ಗಳ ಟೆನಿಸ್ ಕೋರ್ಟ್‌ಗಳನ್ನು ಮುಂದಿನ ಸಲದಿಂದ ಅವರ ಗೈರು ಕಾಡಲಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65